"ತುರ್ತು"

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ನೇವಿ-1/ಲೋದೂಬ/107/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 10.08.2020.

# ಸುತ್ತೋಲೆ

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊರಗುತ್ತಿಗೆ/ಸಿ.ಡಿ.ಸಿ. ಗ್ರೂಪ್-"ಡಿ" ಅನುದಾನದಲ್ಲಿ ಹುದ್ದೆಗಳ ಸೇವೆಯನ್ನು ಬಳಸಿಕೊಂಡಿರುವ ಬಗ್ಗೆ.

ಉಲ್ಲೇಖ:1) ಸರ್ಕಾರದ ಆದೇಶ ಸಂಖ್ಯೆ:ಇಡಿ/191/ಡಿಸಿಇ/96 ದಿನಾಂಕ:27.08.1996.

2) ಸರ್ಕಾರದ ಆದೇಶ ಸಂಖ್ಯೆ:ಆಇ/3/ಟಿಎಫ್‌ಪಿ/2017 ದಿ:07.07.2017.

3) ಈ ಕಛೇರಿ ಸುತ್ತೋಲೆ ಸಂಖ್ಯೆ:ಕಾಶಿಇ/425/ಗ್ರೂಪ್-ಡಿ/2017-18/ ನೇವಿ-1, ದಿನಾಂಕ:22.01.2020.

4) ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ:2432/2019ಕ್ಕೆ ಸಂಬಂಧಿಸಿದಂತೆ ದಿನಾಂಕ:20.12.2019 ಮತ್ತು 10.03.2020ರ.

5) ಮಾನ್ಯ ಲೋಕಾಯುಕ್ತರ ಪತ್ರ ಸಂಖ್ಯೆ:ಲೋಕ/ಬಿಸಿಡಿ/2432/2019, ದಿನಾಂಕ:07.07.2020.

6) ಈ ಕಛೇರಿಯ ಇದೇ ಕ್ರಮಾಂಕದ ಸುತ್ತೋಲೆ ದಿನಾಂಕ:22.07.2020.

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಮಂಡ್ಯ ಜಿಲ್ಲೆಯ ಕೊಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗ್ರೂಪ್-ಡಿ ಸಿಬ್ಬಂದಿಯಾಗಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಮುರಳೀಧರ ಕೆ.ಆರ್. ಇವರು ಕನಿಷ್ಠ ವೇತನವನ್ನು ನಿಗದಿಪಡಿಸಿ, ವೇತನವನ್ನು ಬಿಡುಗಡೆ ಮಾಡುವಂತೆ ಕೋರಿ, ದಿನಾಂಕ:04.09.2019ರಲ್ಲಿ ಮಾನ್ಯ ಲೋಕಾಯುಕ್ತ ಕರ್ನಾಟಕ ಇವರಿಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸದರಿ ದೂರಿನ ಬಗ್ಗೆ ಮಾನ್ಯ ಲೋಕಾಯುಕ್ತರು ವಿಚಾರಣೆ ನಡೆಸಿ ದಿನಾಂಕ:20.12.2019ರ ಆದೇಶ ಸಂಖ್ಯೆ:ಕಂಪ್ಲೆಟ್/ಲೋಕ/ಬಿಸಿಡಿ/2432/2019/ ಎಆರ್‌ಇ ರಲ್ಲಿ ಕಾಲೇಜುಗಳಲ್ಲಿ ಹೊರಗುತ್ತಿಗೆ ಹಾಗೂ ಇತರ ಮೂಲಗಳಿಂದ ಗ್ರೂಪ್-ಡಿ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿರುವ ಮಾಹಿತಿಗಳನ್ನು ಸಲ್ಲಿಸಲು ಸೂಚಿಸಿದ್ದು, ಅದರಂತೆ ಪ್ರಾಂಶುಪಾಲರುಗಳಿಂದ ಗ್ರೂಪ್-ಡಿ ನೇಮಕ ಮಾಡಿಕೊಂಡಿರುವ ಮಾಹಿತಿಯನ್ನು ಪಡೆದು ಮಾನ್ಯ ಲೋಕಾಯುಕ್ತಕ್ಕೆ ವರದಿ ಸಲ್ಲಿಸಲಾಗಿತ್ತು.

ದಿನಾಂಕ:10.03.2020 ರಂದು ಸದರಿ ಪ್ರಕರಣ ವಿಚಾರಣೆಗೆ ಬಂದಾಗ ಮಾನ್ಯ ಲೋಕಾಯುಕ್ತರು ಗ್ರೂಪ್-ಡಿ ಸಿಬ್ಬಂದಿಗಳಿಗೆ ವೇತನ ನೀಡುವ ಬಗ್ಗೆ ಈ ಕೆಳಗಿನಂತೆ ಆದೇಶಿಸಿರುತ್ತಾರೆ. **" However it is needless to point out that till the final decision is taken, all the Class-IV employees are required to be paid their monthly salary regularly".**

ಮಾನ್ಯ ಲೋಕಾಯುಕ್ತರ ಆದೇಶದಂತೆ, ಪ್ರಾಂಶುಪಾಲರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈಗಾಗಲೇ 47 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ನಿಯಮಾನುಸಾರ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿರುವ 158 ಗ್ರೂಪ್-ಡಿ ಸಿಬ್ಬಂದಿಗಳಿಗೆ ಈ ಕಛೇರಿಯಿಂದ ವೇತನ ಬಿಡುಗಡೆಗೆ ಕ್ರಮಕೈಗೊಳ್ಳಲಾಗಿದೆ. ಉಳಿದಂತೆ 25 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳದ 86 ಗ್ರೂಪ್-ಡಿ ಸಿಬ್ಬಂದಿಯವರಿಗೆ ಮತ್ತು 261 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ (ಸಿ.ಡಿ.ಸಿ.) ಅನುದಾನದಲ್ಲಿ ನೇಮಕ ಮಾಡಿಕೊಂಡಿರುವ ಗ್ರೂಪ್-ಡಿ ಸಿಬ್ಬಂದಿಗಳಿಗೆ ಸಿ.ಡಿ.ಸಿ. ಅನುದಾನದಲ್ಲಿ ಪ್ರಾಂಶುಪಾಲರ ಹಂತದಲ್ಲಿಯೇ ಕನಿಷ್ಠ ವೇತನ ಕಾಯ್ದೆಯನ್ವಯ ಈಗಾಗಲೇ ನೀಡಿರುವ ವೇತನವನ್ನು ಹೊರತುಪಡಿಸಿ ವ್ಯತ್ಯಾಸದ ಮೊತ್ತವನ್ನು ಪಾವತಿಸಿ, ವೇತನ ಪಾವತಿಸಿದ ಮಾಹಿತಿಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸುವಂತೆ ಉಲ್ಲೇಖ(6)ರ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಅದರಂತೆ, ಕಾಲೇಜುಗಳ ಪ್ರಾಂಶುಪಾಲರುಗಳು ಈ ಕಛೇರಿಯಿಂದ ನೀಡಿದ್ದ ನಿಗದಿತ ನಮೂನೆಯಲ್ಲಿ ಸ್ಪಷ್ಟ ಮಾಹಿತಿಯನ್ನು ಸಲ್ಲಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಆದ್ದರಿಂದ ತಾವು ಹಿಂದೆ ಪ್ರಾದೇಶಿಕ ಜಂಟಿ ನಿರ್ದೇಶಕರ ಮೂಲಕ ಸಲ್ಲಿಸಿರುವ ಮಾಹಿತಿಗಳಂತೆ, ಗ್ರೂಪ್-ಡಿ ನೌಕರರ ಹೆಸರು, ನೀಡಿರುವ ವೇತನ, ಕಾರ್ಯನಿರ್ವಹಿಸಿದ ಅವದಿ ಹಾಗೂ ಕನಿಷ್ಠ ವೇತನದನ್ವಯ ನೀಡಿದ ವ್ಯತ್ಯಾಸ ಮೊತ್ತದ ಮಾಹಿತಿಗಳನ್ನು ಈ ಸುತ್ತೋಲೆಯೊಂದಿಗೆ ನಮೂದಿಸಿರುವ ನಮೂನೆಯಲ್ಲಿ ತಪ್ಪದೇ ನಮೂದಿಸಿ, ಎರಡು ದಿನಗಳೊಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

**ಅಡಕ: ನಮೂನೆ ಹಾಗೂ ಕನಿಷ್ಠ ವೇತನ ನಿಯಮದ ಪ್ರತಿ.**

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

***ಇವರಿಗೆ,***

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, **ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ & ಕಲಬುರಗಿ,** ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮಾಹಿತಿಯನ್ನು ತುರ್ತಾಗಿ ಈ ಕಛೇರಿಗೆ ಸಲ್ಲಿಸಲು ಕ್ರಮವಹಿಸುವುದು.
2) ಅನುಬಂಧದಲ್ಲಿ ಲಗತ್ತಿಸಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ –ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3) ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಕಾಲೇಜಿನ ಹೆಸರು:

| ಕ್ರ. ಸಂ. | ಸಿ.ಡಿ.ಸಿ.ಯಿಂದ ಆಯ್ಕೆ ಮಾಡಿಕೊಂಡಿರುವ ಸಿಬ್ಬಂದಿ ಹೆಸರು | ಕಾರ್ಯನಿರ್ವಹಿಸಿದ ಅವಧಿ ಗಂಟೆಗಳಲ್ಲಿ (ದಿನಕ್ಕೆ ಎಷ್ಟು ಗಂಟೆ) | ಮಾಹೆಯಾನ ಕನಿಷ್ಠ ವೇತನ ಕಾಯ್ದೆ ಅಡಿ ನೀಡಬೇಕಾದ ವೇತನದ ಮೊತ್ತ | ಸಿ.ಡಿ.ಸಿ. ಅನುದಾನದಲ್ಲಿ ಈಗಾಗಲೇ ನೀಡಿರುವ ವೇತನ ಮತ್ತು ಕನಿಷ್ಠ ಕಾಯ್ದೆಯನ್ವಯ ವೇತನ ನೀಡಿ/ನೀಡಬೇಕಾದಲ್ಲಿ ವೇತನ ವ್ಯತ್ಯಾಸ ಮೊತ್ತ | | | | | | | | | | ಒಟ್ಟು (ಕ್ರ.ಸಂ.6,8, 10, 12 & 14 ರ ಕ್ರೋಢಿಕೃತ ವ್ಯತ್ಯಾಸದ ಮೊತ್ತ) | ಷರಾ ವ್ಯತ್ಯಾಸದ ಮೊತ್ತ ಪಾವತಿಸಲಾಗಿದೆಯೆ? ಇತರ ವಿವರಗಳು. |
|---|---|---|---|---|---|---|---|---|---|---|---|---|---|---|---|
| | | | | ಮಾರ್ಚ್ ತಿಂಗಳಲ್ಲಿ ಸಿ.ಡಿ.ಸಿ.ಯಿಂದ ಪಾವತಿಸಿರುವ ಮೊತ್ತ | ಮಾರ್ಚ್ ತಿಂಗಳಲ್ಲಿ ಕನಿಷ್ಠ ಕಾಯ್ದೆಯನ್ವಯ ಪಾವತಿಸಬೇಕಾದ ವ್ಯತ್ಯಾಸದ ಮೊತ್ತ | ಏಪ್ರಿಲ್ ತಿಂಗಳಲ್ಲಿ ಸಿ.ಡಿ.ಸಿ.ಯಿಂದ ಪಾವತಿಸಿರುವ ಮೊತ್ತ | ಏಪ್ರಿಲ್ ತಿಂಗಳಲ್ಲಿ ಕನಿಷ್ಠ ಕಾಯ್ದೆಯನ್ವಯ ಪಾವತಿಸಬೇಕಾದ ವ್ಯತ್ಯಾಸದ ಮೊತ್ತ | ಮೇ ತಿಂಗಳಲ್ಲಿ ಸಿ.ಡಿ.ಸಿ.ಯಿಂದ ಪಾವತಿಸಿರುವ ಮೊತ್ತ | ಮೇ ತಿಂಗಳಲ್ಲಿ ಕನಿಷ್ಠ ಕಾಯ್ದೆಯನ್ವಯ ಪಾವತಿಸಬೇಕಾದ ವ್ಯತ್ಯಾಸದ ಮೊತ್ತ | ಜೂನ್ ತಿಂಗಳಲ್ಲಿ ಸಿ.ಡಿ.ಸಿ.ಯಿಂದ ಪಾವತಿಸಿರುವ ಮೊತ್ತ | ಜೂನ್ ತಿಂಗಳಲ್ಲಿ ಕನಿಷ್ಠ ಕಾಯ್ದೆಯನ್ವಯ ಪಾವತಿಸಬೇಕಾದ ವ್ಯತ್ಯಾಸದ ಮೊತ್ತ | ಜುಲೈ ತಿಂಗಳಲ್ಲಿ ಸಿ.ಡಿ.ಸಿ.ಯಿಂದ ಪಾವತಿಸಿರುವ ಮೊತ್ತ | ಜುಲೈ ತಿಂಗಳಲ್ಲಿ ಕನಿಷ್ಠ ಕಾಯ್ದೆಯನ್ವಯ ಪಾವತಿಸಬೇಕಾದ ವ್ಯತ್ಯಾಸದ ಮೊತ್ತ | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | | | | | | | | |

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಾಇ/ಎಲ್ಎಂಡಬ್ಲ್ಯೂಇ/2017, ದಿನಾಂಕ:30.12.2017 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ:ಎಲ್‌ಡಿ/51/2017, ದಿನಾಂಕ:29.12.2017ರ ಪ್ರಕಾರ ಮಾಹೆಯಾನ ಮತ್ತು ಪ್ರತಿ ಗಂಟೆಗೆ ನೀಡಬೇಕಾದ ಮೊತ್ತ.

| ಕ್ರ. ಸಂ. | ವಲಯ | ಕನಿಷ್ಠ ವೇತನ | | |
|---|---|---|---|---|
| | | ತಿಂಗಳಿಗೆ ವೇತನ ರೂ | ಪ್ರತಿ ದಿನಕ್ಕೆ ಪಾವತಿಸಬೇಕಾದ ಮೊತ್ತ | ಪ್ರತಿ ಗಂಟೆಗೆ ರೂ. |
| 1 | ವಲಯ-1 :- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಪ್ರದೇಶಗಳು. | 13,281 | 445 | 56 |
| 2 | ವಲಯ-2:- ವಲಯ-1 ನ್ನು ಹೊರತುಪಡಿಸಿ, ರಾಜ್ಯ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಅಧಿಸೂಚಿತ ಪ್ರದೇಶಗಳು. | 12,729 | 424 | 53 |
| 3 | ವಲಯ-3 :- ವಲಯ-1 ಮತ್ತು 2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು. | 12,203 | 404 | 51 |
| 4 | ವಲಯ-4:- ವಲಯ-1, 2, & 3 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ, ರಾಜ್ಯ ಇತರೇ ಎಲ್ಲಾ ಪ್ರದೇಶಗಳು. | 11,703 | 385 | 48 |